ಚೆನ್ನಾಗಿವೆ. ಕಾಮ ಕುರಿತು ಅವರ ಹಾಗೆ ಬರೆಯೋದು ಕಷ್ಟ.

ಅವರ ಸೆಕ್ಸ್ ಟಾಯ್ ಕಾದಂಬರಿ ನನ್ನ ದೃಷ್ಟಿಯಲ್ಲಿ ದೇಶದ ಸಮಕಾಲೀನ ಕಾದಂಬರಿಗಳ ಪೈಕಿ ಮುಖ್ಯವಾದದ್ದು. ಸ್ವಚ್ಛಂದ ಕಾಮ ಅನ್ನೋ ಹೆಸರಲ್ಲಿ ಅದು ಕನ್ನಡಕ್ಕೆ ಚಂದ್ರಿಕಾ ಮನೋಹರ್ ಅನ್ನೋರು ಟ್ರಾನ್ಸ್‌ಲೇಟ್ ಮಾಡಿದ್ದಾರೆ, ಓದಿದ್ದೀರಾ? ಕೇಳಿದರು.

'ಕೆಲವು ಸಲ ನಂಗೂ ಅವರ ಹಾಗೆ ಬರೆಯಬೇಕು ಅನ್ಸುತ್ತೆ. ಆದರೆ ಹೆಂಡ್ತಿ, ಮಕ್ಕಳು, ಓದುಗರು ಏನಂದುಕೊಳ್ತಾರೋ ಅನ್ನೋ ಭಯ...'

ಕಾದಂಬರಿಯ ನಾಯಕಿಗೆ ಕಾಮಸನ್ನಿ. ಅವಳ ನಿರ್ಲಜ್ಜ ವರ್ತನೆಗಳು, ಮಾತುಗಳು ಹಸಿ ಹಸಿಯಾಗಿ ಬರೆದಿದ್ದಾರೆ! ನೀವೇನೇ ಹೇಳಿ ಅರುಣಾದಾಸ್ ನಮ್ಮ ಕಾಲದ ದೊಡ್ಡ ಲೇಖಕಿ. ಅವರ ಇಂಗ್ಲಿಷ್ ಕಾದಂಬರಿಗಳು ಮರಾಠಿ, ಮಲಯಾಳಂಗೆ ಅನುವಾದ ಆಗಿವೆ. ಅವರಿಗೆ ಸಾಹಿತ್ಯಸಿರಿ ಬಂದರೆ ನಂಗೆ ಸಂತೋಷವಾಗುತ್ತೆ. ಆದರೆ ಅವರಿಗೆ ಇನ್ನೂ ನಲ್ವತ್ತು ವರ್ಷ. ಗಂಡ ಯಾವುದೋ ಇಂಗ್ಲಿಷ್ ಟೀವಿಯಲ್ಲಿ ಕೆಲ್ಸ ಮಾಡ್ತಾರಂತೆ. ಅವರಿಂದಾಗಿ ಟೀವಿಗಳಲ್ಲಿ ಸಿಕ್ಕಾಪಟ್ಟೆ ಪ್ರಚಾರ ಸಿಗ್ತಿದೆ! ಪತ್ರಿಕೆಗಳವರಿಗೂ ಆಕೆ ಇಷ್ಟ. ಸಂದರ್ಶನ ಮಾಡ್ತೀವಿ, ನಿಮ್ಮ ಒಪೀನಿಯನ್ ಬೇಕು ಅಂತ ದುಂಬಾಲು ಬೀಳ್ತಾರಂತೆ ಎಂದು ಹೇಳಿ, ಮತ್ತೇನು ಎಂದು ಕೇಳಿದರು.

ಮೃತ್ಯುಂಜಯ, ನೀವು ನನ್ನ ಆಪ್ತರು. ನಿಮಗೊಂದು ವಿಷಯ ಹೇಳ್ತೀನಿ, ನಾನು ಹೇಳೋದನ್ನು ದಯವಿಟ್ಟು ಯಾರಿಗೂ ಹೇಳಬೇಡಿ ಎಂದು ಹೇಳಿ ಕೆಲವು ಸೆಕೆಂಡುಗಳು ಮೌನವಾದರು.

'ನಂಗೆ ಅಲ್ಝಮೈರ್ ಕಾಯಿಲೆ ಲಕ್ಷಣಗಳು ಕಾಣ್ತಿವೆ! ನಿನ್ನೆ ಫೋನ್ ಮಾಡಿದ್ದು ನೀವೇ ಅಂತ ನಂಗೆ ಗೊತ್ತೇ ಆಗಲಿಲ್ರಿ. ಸಂಜೆ ಕ್ಯಾಷುಯಲ್ಲಾಗಿ ನಿಮ್ಮ ನೆನಪಾಯ್ತು. ಮಾತಾಡಿ ಬಹಳ ದಿನಗಳಾದ್ವಲ್ಲ ಅಂತ ನಾನೇ ಕಾಲ್ ಮಾಡಿದೆ. ನನ್ನ ಪರಿಸ್ಥಿತಿ ದಿನೇ ದಿನೇ ಗಂಭೀರವಾಗ್ತಿದೆ. ಟ್ರೀಟ್‌ಮೆಂಟ್ ತಗಳ್ತಿದ್ದೀನಿ. ಸರಿ ಹೋಗುತ್ತೆ ಅಂತ ಡಾಕ್ಟರ್ ಹೇಳಿದ್ದಾರೆ. ಆಗಾಗ ಮೆಮೊರಿ ಸಮಸ್ಯೆ ಬರುತ್ತೆ...' ಎಂದು ವಿಷಾದ ಭಾವದಲ್ಲಿ ಹೇಳಿದರು.

'ಮನುಷ್ಯನಿಗೆ ನೆನಪುಗಳು ಮುಖ್ಯ. ನೆನಪೇ ಆಗದಿದ್ದರೆ ಹೆಂಗ್ರಿ ಬದುಕೋದು? ನೆನಪುಗಳ ಮೇಲೇ ಅಲ್ಲವೇ ಜೀವನ ಮುಂದಕ್ಕೆ ಹೋಗೋದು?. ನಾನು ಯಾರು, ನನ್ನ ಅಪ್ಪ,ಅಮ್ಮ, ಊರು, ನನ್ನ ದೇಶ, ಭಾಷೆ ಯಾವುದು. ಹೆಂಡ್ತಿ, ಮಕ್ಳು ಯಾರು? ಇಷ್ಟು ವರ್ಷ ಏನು ಮಾಡಿದೆ? ಏನು ಬರೆದೆ ಅನ್ನೋದು ನೆನಪೇ ಆಗದಿದ್ರೆ ಬದುಕಿಗೆ ಏನು ಅರ್ಥ ಇರುತ್ತೆ? ಮೂವತ್ತು ವರ್ಷ ಯೂನಿವರ್ಸಿಟಿಯಲ್ಲಿ ಸಾಹಿತ್ಯದ ಪಾಠ ಹೇಳಿದ್ದೀನಿ. ನನ್ನ ನೋಡಬೇಕು ಅಂತ ಈಗಲೂ ಅನೇಕರು ಹುಡುಕಿಕೊಂಡು ಬರ್ತಾರೆ. ಬಂದವರು ಯಾರು ಅನ್ನೋದು ಗೊತ್ತೇ ಆಗದಿದ್ದರೆ ಹೆಂಗ್ರಿ? ಹೆಂಡತಿ ಎದುರಿಗೇ ಇದ್ದರೂ ಕೆಲವು ಸಲ ಅವಳ ಹೆಸರು ನೆನಪಾಗಲ್ಲ! ಹಸಿವಾಗ್ತಿದೆ ತಿನ್ನೋಕೆ ಏನಾದರೂ ಕೊಡು ಅಂತ ಕೇಳದೆ ಸುಮ್ಮನೆ ಕೂತಿರ್ತೀನಂತೆ! ಕಳೆದ ತಿಂಗಳು ಇದೇ ಊರಲ್ಲಿರೋ ಮಗಳ ಮನೆಗೆ ಹೋಗಿದ್ದೆ. ಅಲ್ಲಿಂದ ಬಂದ ಮೇಲೆ ಮಗಳು ಊಟ ಹಾಕದೆ ಕಳಿಸಿದಳು ಅಂತ ಹೇಳಿದೆನಂತೆ! ಅದಕ್ಕೆ ಹೆಂಡತಿ ನನ್ನ ಪಕ್ಕದಲ್ಲೇ ಕೂತು ಊಟ ಮಾಡಿದ್ರಿ. ಮಗಳು ಊಟ ಹಾಕಲಿಲ್ಲ ಅಂತ ಯಾವ ಬಾಯಲ್ಲಿ ಹೇಳ್ತೀರಿ? ಏನಾಗಿದೆ ನಿಮಗೆ ಎಂದು ಕೇಳಿದಳು. ದಿನಕ್ಕೆ ಏಳೆಂಟು ಸಲ ಹೀಗಾಗುತ್ತೆ. ಮತ್ತೆ ಯಾವಾಗಲೋ ನೆನಪಾಗುತ್ತೆ. ಮುಂದೆ ನೆನಪೇ ಆಗದಿದ್ದರೆ ನನ್ನ ಗತಿ ಏನು? ಕೇಳಿದರು.

'ಸುಮ್ಮನೆ ಕೂತೇ ಇರ್ತೀರಲ್ಲ, ಏನು ಯೋಚನೆ ಮಾಡ್ತೀರಿ? ನಾನು ಮಾತಾಡ್ತ ಇದ್ದರೂ ಸುಮ್ಮನೆ ಇರ್ತೀರಿ...' ಎಂದು ಹೆಂಡತಿ ಕೇಳ್ತಾಳೆ. ನೆನಪು ಕೈಕೊಡ್ತಿರೋ ವಿಷಯವನ್ನು ಅವಳಿಂದ ಮುಚ್ಚಿಟ್ಟು ಇಷ್ಟು ದಿನ ಹೇಗೋ ಮ್ಯಾನೇಜ್ ಮಾಡಿದೆ. ಮೊನ್ನೆ ಹೇಳಿ ಬಿಟ್ಟೆ. ಅದಕ್ಕವಳು ಒಳ್ಳೆಯದಾಯ್ತು. ಅಭಿಮಾನಿ ಅಂತ ಹೇಳಿಕೊಂಡು ಫೋನ್‌ನಲ್ಲಿ ಗಂಟೆಗಟ್ಟಲೆ ಹೆಂಗಸರ ಜತೆ ನೀವು ಮಾತಾಡೋದು ತಪ್ಪುತ್ತೆ. ಯಾವುದೇ ಹೆಂಗಸಿನ ಹೆಸರೂ ನಿಮಗೆ ನೆನಪಾಗಬಾರದು ಅಂದಳು. ಅವಳು ಹಳ್ಳಿ ಹೆಂಗ್ಸು. ತಮಾಷೆಗೆ ಹೇಳಿದಳೋ, ವ್ಯಂಗ್ಯವೋ ಗೊತ್ತಾಗಲಿಲ್ಲ ಎಂದು ಪ್ರಭುದೇವ ಹೇಳುತ್ತಿರುವಾಗ ಫೋನ್ ಡಿಸ್‌ಕನೆಕ್ಟ್ ಆಯಿತು.

ಮೃತ್ಯುಂಜಯನಿಗೆ ಪಾಪ ಅನ್ನಿಸಿತು. ವಿಷಾದದ